# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 404(407)
2. ಸದಸ್ಯರ ಹೆಸರು : ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 15.09.2022
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನೀರಾವರಿ ಯೋಜನಗಳಿಗೆ ಎಷ್ಟು ರೈತರಿಂದ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ; ಇಂತಹ ಜಮೀನುಗಳಿಗೆ ಇನ್ನೂ ಭೂಪರಿಹಾರ ಕೊಡುವುದು ಬಾಕಿ ಇದೆಯೇ; ಇದ್ದಲ್ಲಿ, ಹಣ ಪಾವತಿಸಲು ಬಾಕಿ ಇರುವ ಮೊತ್ತವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ವಿಶ್ವೇಶ್ವರಯ್ಯ ಜಲ ನಿಗಮದಡಿ ಕೋಲಾರ ಜಿಲ್ಲೆಯಲ್ಲಿ ಯಾವುದೇ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ.<br><br>ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ ಗೌರಿಬಿದನೂರು ಗ್ರಾವಿಟಿ ಫೀಡರ್ ಕಾಲುವೆ ಯೋಜನೆಗೆ 35 ಗ್ರಾಮಗಳಲ್ಲಿ 1097 ರೈತರಿಂದ 92-28 ಗುಂಟೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳಲು ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿ ಇರುತ್ತದೆ. ದಿನಾಂಕ:19.02.2022. 24.02.2022. ಮತ್ತು 10.03.2022ರಲ್ಲಿ ಕಲಂ 11(1) ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಕಲಂ 15(1) ರಲ್ಲಿ ಸ್ವೀಕೃತ್ತಿಯಾದ ತಕರಾರು ಅರ್ಜಿಗಳಿಗೆ ಕಲಂ 15(2)ರಲ್ಲಿ ವಿಚಾರಣೆ ಪ್ರಕ್ರಿಯೆ ಅಂತಿಮ ಹಂತದಲಿದ್ದು, ಕಲಂ 19(1)ರಡಿ ಅಂತಿಮ ಅಧಿಸೂಚನೆಯಾಗಿರುವುದಿಲ್ಲ. ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಅವಾರ್ಡ್ ತಯಾರಿಸಿ ನಿಯಮಾನುಸಾರ ಭೂಮಾಲೀಕರಿಗೆ/ರೈತರಿಗೆ ಭೂಪರಿಹಾರ ಪಾವತಿಸಲು ಕ್ರಮಕೈಗೊಳ್ಳಲು ಯೋಜಿಸಲಾಗಿದೆ. |
| ಆ) | ನೀರಾವರಿ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಳ್ಳುವುದಕ್ಕೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಇರುವ ಹಣವೆಷ್ಟು; (ಮಾಹಿತಿ ನೀಡುವುದು). | ನೀರಾವರಿ ಯೋಜನೆಗಳಿಗೆ ನಿಗಮದಲ್ಲಿ ಪ್ರಸ್ತುತ ಪಿ.ಡಿ. ಖಾತೆಯಲ್ಲಿ ಭೂಸ್ವಾಧೀನ ಪಾವತಿಗಳನ್ನು ನಿರ್ವಹಿಸುತ್ತಿರುವುದಿಲ್ಲ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. |
| ಇ) | ವರ್ಷಾನುಗಟ್ಟಲೆಯಿಂದ ಭೂಸ್ವಾಧೀನಕ್ಕಾಗಿ ಹಣ ಲಭ್ಯವಿದ್ದರೂ ಸಹ ಭೂಮಿ ಕಳೆದುಕೊಂಡ ರೈತರಿಗೆ ಹಣ ಬಿಡುಗಡೆ ಮಾಡಲು ವಿಳಂಬ ಮಾಡುತ್ತಿದ್ದು. ಈ ವಿಳಂಬದಿಂದಾಗಿ ಬಡ್ಡಿ ಪಾವತಿಗಾಗಿ ರಾಜ್ಯ ಖಜಾನೆಗೆ ಕೋಟ್ಯಾಂತರ ರೂಪಾಯಿ ನಷ್ಟವಾಗಿತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಪರಿಹಾರದ ಹಣ ಪಾವತಿಸಲಾಗುವುದು? | ಭೂಸ್ವಾಧೀನ ಕಾಯ್ದೆ 2013ರ ಕಲಂ 19(1)ರಡಿ ಅಂತಿಮ ಅಧಿಸೂಚನೆಯಾಗಿರುವುದಿಲ್ಲ. ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಅವಾರ್ಡ್ ತಯಾರಿಸಿ ನಿಯಮಾನುಸಾರ ಭೂಮಾಲೀಕರಿಗೆ/ರೈತರಿಗೆ ಭೂಪರಿಹಾರ ಪಾವತಿಸಲು ಕ್ರಮಕೈಗೊಳ್ಳಲು ಯೋಜಿಸಲಾಗಿದೆ. |

**ಸಂಖ್ಯೆ: ಜಸಂಇ 71 ಡಬ್ಲ್ಯೂಎಲ್ಎ 2022**

**(ಗೋವಿಂದ ಎಂ ಕಾರಜೋಳ)**
**ಜಲಸಂಪನ್ಮೂಲ ಸಚಿವರು**